ಪೊಲೀಸರು ಬರುವಂತೆ ವ್ಯವಸ್ಥೆ ಮಾಡಿದ್ದಲ್ಲದೆ, ಆರೋಪಿಯನ್ನು ಹಿಡಿಯುವಂತೆ ಮಾಡಿದ್ದಾನೆ. ಇಲ್ಲಿವರೆಗೆ ಪೊಲೀಸರು ಒಂದು ಗಂಟೆಯೊಳಗೆ ಆರೋಪಿಗಳನ್ನು ಹಿಡಿದದ್ದಿದೆಯಾ? ಹಾಟ್‌ಮಿಟ್ಲೆ ಸಹಾಯದಿಂದಲೇ ಅಷ್ಟು ಬೇಗ ಹಿಡಿಯಲು ಸಾಧ್ಯವಾಯಿತು' ಹೀಗೆ ಹಾಟ್‌ಮಿಟ್ಲೆ ಸಾಧನೆಯ ಬಗ್ಗೆ ಶ್ಲಾಘನೆಯ ಪ್ರಚಾರಗಳು ಆತ ನಡೆದಾಡುವ ಪ್ರದೇಶಗಳಲ್ಲಿ ಅವನಿಗಿಂತ ಮುಂದೆ ನಡೆದಾಡಿದವು.

ಅಲ್ಲಿವರೆಗೆ ನಿಯತ್ತಿನ ಅರೆ ಹುಚ್ಚ ಎಂದೋ, ಶಿಸ್ತುಬದ್ಧ ಭಿಕ್ಷುಕ ಎಂದೋ ತಿಳಿದು ಒಂದು ರೂಪಾಯಿ ಅಥವಾ ತಿಂಡಿ ನೀಡಲಾಗುತ್ತಿತ್ತು. ಈ ಘಟನೆಯ ಬಳಿಕ ಹಾಗೆ ಮಾಡುವುದು ಭಾರತದ ಪ್ರಜೆಗಳಾಗಿ ತಮ್ಮ ಕರ್ತವ್ಯ ಎಂದು ತಿಳಿದರು.

ಈ ಘಟನೆಯ ಬಳಿಕ ದೊಡ್ಡ ಹೋಟೆಲ್, ಬಾರ್, ಅಂಗಡಿಗಳಲ್ಲಿಯೂ ದುಡ್ಡು ಸಿಗತೊಡಗಿತು. ಈಚೀಚೆ ಆತನನ್ನು ಒಮ್ಮೆ ನೋಡಿ ತಮ್ಮ ಜೀವನವನ್ನು ಪಾವನ ಮಾಡಿಕೊಳ್ಳಲು ಬೇರೆ ಬೇರೆ ಊರಿಂದ ಜನ ಬರುತ್ತಿದ್ದರು. ದೂರದಿಂದಲೇ ನೋಡಿ ಅಥವಾ ಹತ್ತಿರ ಬಂದು ಒಂದು ರೂಪಾಯಿ ನೀಡಿ ಹರಕೆ ಸಲ್ಲಿಸಿದ ಧನ್ಯತಾಭಾವದಲ್ಲಿ ಹಿಂತಿರುಗುತ್ತಿದ್ದರು.

ಉಪ್ಪೊಳಿಗೆ ಲಾರಿ ತೊಳೆಯುವಲ್ಲಿ ಲಾರಿ ಇಲ್ಲದಾಗ ದಾಡ್‌ಫೀಡ್, 28 ಮುಂತಾದ ಇಸ್ಪೀಟ್ ಆಟಗಳು ನಡೆಯುತ್ತಿದ್ದವು. ಹಿಂದೆ ಹಾಟ್‌ಮಿಟ್ಲೆ ಬಂದರೂ ಆಟಕ್ಕೇನೂ ಧಕ್ಕೆಯಾಗಿರಲಿಲ್ಲ. ಈಗ ಅವನು ಬರುವ ದಿನ ಅವೆಲ್ಲ ಬಂದ್. ಮತ್ತೆ ಆಟ ಆರಂಭವಾಗಬೇಕಿದ್ದರೆ ಆತ ಅಲ್ಲಿಂದ ಹೊರಟು ಸ್ವಲ್ಪ ದೂರ ಹೋದ ಎಂಬುದು ಖಚಿತಗೊಳ್ಳಬೇಕಿತ್ತು.

'ಅವನ್ಯಾವ ಜಾತಿಯವನೋ ಏನೋ', 'ಅವ ಸರಿ ಇದ್ದಾನೆ. ಬದುಕುವುದಕ್ಕಾಗಿ ನಾಟಕವಾಡುತ್ತಾನೆ', 'ಸದ್ಯ ಕಳ್ಳತನ ಮಾಡುತ್ತಿಲ್ಲವಲ್ಲ...' ಎಂದೆಲ್ಲ ಒಂದು ರೂಪಾಯಿಯೂ ಬಿಚ್ಚದ, ಊರ ಗಣ್ಯರೆನಿಸಿದವರ ಮಾತುಗಳಿಗೆ ಬೀಗ ಬಿತ್ತು. ಅವರೂ ಒಂದು ರೂಪಾಯಿ ಹಿಡಿದು ಹಾಟ್‌ಮಿಟ್ಲೆ ಬರುವ ದಿನವನ್ನು ಕಾಯಲು ಆರಂಭಿಸಿದ್ದರು.

ಬಿಳಲೂರಿನಿಂದ ಹೋಗುವಾಗ ಮಣ್ಣು ಮೆತ್ತಿಕೊಂಡು ಹೋಗದೆ ಬರುವಾಗ ಮಾತ್ರ ಕೈಕಾಲುಗಳಿಗೆ ಮಣ್ಣು ಮೆತ್ತಿಸಿಕೊಂಡು ಬರುತ್ತಿದ್ದದನ್ನು ನಿರ್ಲಕ್ಷಿಸಲಾಗಿತ್ತು. ಈಗ ಅದಕ್ಕೂ ಕಾರಣಗಳನ್ನು ಹುಡುಕಲಾಯಿತು. 'ಮಣ್ಣು ಒಳ್ಳೆಯ ಆಯುರ್ವೇದ ಔಷಧ. ವಿದೇಶಿಯರೆಲ್ಲ ಮೈಮೇಲೆ ಮಣ್ಣು ಮೆತ್ತಿಕೊಂಡು ಬಿಸಿಲಲ್ಲಿ ಬಿದ್ದುಕೊಳ್ಳುವುದಿಲ್ವ ಹಾಗೆ. ಇದರಿಂದ ಆರೋಗ್ಯ ವೃದ್ಧಿಸುತ್ತದೆ. ಇಲ್ಲದಿದ್ದರೆ ಗಾಳಿ, ಮಳೆ, ಬಿಸಿಲಿಗೆ ಮೈಯೊಡ್ಡಿಯೇ ಇರುತ್ತಿದ್ದರೂ ಒಂದು ದಿನ ಶೀತ, ಜ್ವರ ಎಂದು ಮಲಗಿದ್ದನ್ನು ನಾವು ಕಂಡಿಲ್ಲ. ನಾವು ಬೆಚ್ಚಗೆ ಮನೆಯೊಳಗೆ ಮಲಗಿದರೂ, ಮಳೆಗೆ ಒದ್ದೆಯಾಗದಂತೆ ಎಚ್ಚರ ವಹಿಸಿದರೂ ಒಂದಲ್ಲ ಒಂದು ರೋಗ ತಪ್ಪುವುದಿಲ್ಲ' ಎಂದು ಸಿಐಡಿಯ ಅಪರಿಮಿತ ಜ್ಞಾನವನ್ನು ಕೊಂಡಾಡಲಾಗುತ್ತಿತ್ತು.

ಹಾಟ್‌ಮಿಟ್ಲೆ ಬರುತ್ತಿದ್ದಂತೆ ಎಲ್ಲರೂ ಗಪ್‌ಚಿಪ್ಪಾಗಿ ಒಂದು ರೀತಿಯ ಗಂಭೀರ ವಾತಾವರಣ ಉಂಟಾಗುತ್ತಿತ್ತು. ಆತ ಬರುವಾಗ ಹಾಟ್‌ಮಿಟ್ಲೆ ಅಥವಾ ವಾಟ್‌ಮಿಟ್ಲೆ ಬಂದ ಅನ್ನುವ ಬದಲು 'ಸಿಐಡಿ' ಎಂದು ಪಿಸುಗುಟ್ಟಲು ಆರಂಭಿಸಿದರು.

ಈ ಖ್ಯಾತಿ ನಿಧಾನಕ್ಕೆ ಸುತ್ತಮುತ್ತಲ ಪ್ರದೇಶ ಮೀರಿ ಆಚೆಗೂ ಹರಡತೊಡಗಿತು. ಆದರೆ ಅದರ ತೀವ್ರತೆ ಇಲ್ಲಿಯಷ್ಟು ಇರಲಿಲ್ಲ. ಆದರೂ ಉಪ್ಪಿನಂಗಡಿ, ಪುತ್ತೂರು ಪೇಟೆಗಳಲ್ಲೂ ಆಟೊ, ಟೆಂಪೊ, ಕಾರು ಚಾಲಕರು, ಬಸ್ ಚಾಲಕರು, ಕ್ಲೀನರು, ಕಂಡಕ್ಟರುಗಳ ನಡುವೆ ಆಗಾಗ